# ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
# Bangalore Development Authority

ಸಂಖ್ಯೆ :
No. ಬೆಂಅಪ್ರಾ/ನಯೋಸ/DLP-31/17-18/ 2409 /2024-25
C.No. 105786

ದಿನಾಂಕ :
Date : 26/12/2024

**ಮಾರ್ಪಾಡಿತ ಕಾರ್ಯಾದೇಶ**

**ವಿಷಯ:-** ಯಲಹಂಕ ತಾಲ್ಲೂಕು, ಯಲಹಂಕ ಹೋಬಳಿ, ಕೆಂಪನಹಳ್ಳಿ ಗ್ರಾಮದ ಸ.ನಂ.7/1, 7/2, 7/3ಪಿ, 9/1, 9/2ಪಿ ಮತ್ತು 10 ರಲ್ಲಿನ ಒಟ್ಟು 10ಎ-14ಗುಂ (0ಎ-06ಗುಂಟೆ ಖರಾಬು ಹೊರತುಪಡಿಸಿ) ವಿಸ್ತೀರ್ಣದ ಪ್ರದೇಶದಲ್ಲಿ ಮಾರ್ಪಡಿತ ವಸತಿ ಅಭಿವೃದ್ಧಿ ಯೋಜನಾ ನಕ್ಷೆಗೆ ಅನುಮೋದನೆ ನೀಡುವಂತೆ ಅರ್ಜಿದಾರರಾದ ಶ್ರೀ ಪ್ರದೀಪ್ ಕೃಷ್ಣಪ್ಪ ರವರ ಜಿಪಿಎದಾರರಾದ ಮೆ|| ಅಜ್ಮೀರಾ ಹೌಸಿಂಗ್ ಕಾರ್ಪೋರೇಷನ್ ರವರು ಕೋರಿರುವ ಕುರಿತು.

**ಉಲ್ಲೇಖ:**
1. ಅರ್ಜಿದಾರರ ಅರ್ಜಿ ದಿನಾಂಕ 03.01.2017.
2. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ನಗರ ಯೋಜನಾ ಸಮಿತಿ ಸಭೆಯ ಠರಾವು ಸಂಖ್ಯೆ 95/2017, ದಿನಾಂಕ 17.08.2017.
3. ಈ ಕಛೇರಿಯ ಕಾರ್ಯಾದೇಶ ಪತ್ರದ ಸಂಖ್ಯೆ ಬೆಂಅಪ್ರಾ/ನಯೋಸ/DLP-31/2016-17 /2136/2017-18 ದಿನಾಂಕ 02.03.2018.
4. ಅರ್ಜಿದಾರರ ಮರು ಮನವಿ ದಿನಾಂಕ 29.10.2024.
5. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ನಗರ ಯೋಜನಾ ಸಮಿತಿ ಸಭೆಯ ಠರಾವು ಸಂಖ್ಯೆ 6.6.5/2024 ದಿನಾಂಕ 30.10.2024.
6. ಈ ಕಛೇರಿಯ ಪತ್ರ ಸಂಖ್ಯೆ:ಬೆಂಅಪ್ರಾ/ನಯೋಸ/DLP-31/17-18/2117/2024-25, ದಿನಾಂಕ 26.11.2024.
7. ಕೆನರಾ ಬ್ಯಾಂಕ್ ಚಲನ್ ನಂ. GN24116736, ದಿನಾಂಕ 28.11.2024.
8. ಪ್ರಾಧಿಕಾರದ ಆರ್ಥಿಕ ಸದಸ್ಯರ ವಿಭಾಗದ ಅನೌಪಚಾರಿಕ ಟಿಪ್ಪಣಿ ಪತ್ರ ಸಂಖ್ಯೆ ಬೆಂಅಪ್ರಾ / ಆಸ/ನಗದು ಶಾಖೆ/ಟ್ಯಾಲಿ/732/2024-25 ದಿನಾಂಕ: 03.12.2024.
9. ಈ ಕಛೇರಿ ಅನೌಪಚಾರಿಕ ಟಿಪ್ಪಣಿ ಸಂಖ್ಯೆ:ಬೆಂಅಪ್ರಾ/ನಯೋಸ/DLP-31/17-18/2346/2024-25, ದಿನಾಂಕ 10.12.2024.
10. ಅಧಿಕ ಜಿಲ್ಲಾ ನೊಂದಣಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ ರವರ 1ನೆ ಪುಸ್ತಕದ ದಸ್ತಾವೇಜು ನಂ. BDA-1-02700-2024-25, ದಿನಾಂಕ 16.12.2024.
11. ಕಾರ್ಯಪಾಲಕ ಅಭಿಯಂತರರು, ಡಾ|| ಕೆ.ಶಿವರಾಮಕಾರಂತ ಬಡಾವಣೆ ವಿಭಾಗ, ಬೆಂಅಪ್ರಾ., ಬೆಂಗಳೂ ಮರು ರವರ ಅನೌಪಚಾರಿಕ ಟಿಪ್ಪಣಿ ದಿನಾಂಕ: 17.12.2024.

* * * * *

ವಿಷಯ:- ಯಲಹಂಕ ತಾಲ್ಲೂಕು, ಯಲಹಂಕ ಹೋಬಳಿ, ಕೆಂಪನಹಳ್ಳಿ ಗ್ರಾಮದ ಸ.ನಂ.7/1, 7/2, 7/3ಪಿ, 9/1, 9/2ಪಿ ಮತ್ತು 10 ರಲ್ಲಿನ ಒಟ್ಟು 10ಎ-14ಗುಂ (0ಎ-06ಗುಂಟೆ ಖರಾಬು ಹೊರತುಪಡಿಸಿ) ವಿಸ್ತೀರ್ಣದ ಪ್ರದೇಶದಲ್ಲಿ ಮಾರ್ಪಡಿತ ವಸತಿ ಅಭಿವೃದ್ಧಿ ಯೋಜನಾ ನಕ್ಷೆಗೆ ಅನುಮೋದನೆ ನೀಡುವಂತೆ ಅರ್ಜಿದಾರರಾದ ಶ್ರೀ ಪ್ರದೀಪ್ ಕೃಷ್ಣಪ್ಪ ರವರ ಜಿಪಿಎದಾರರಾದ ಮೆ|| ಅಜ್ಮೀರಾ ಹೌಸಿಂಗ್ ಕಾರ್ಪೋರೇಷನ್ ರವರು ಕೋರಿರುವ ಕುರಿತು.

---

ಅರ್ಜಿದಾರರ ಉಲ್ಲೇಖ [1] ರಲ್ಲಿನ ಅರ್ಜಿಯಂತೆ ಯಲಹಂಕ ತಾಲ್ಲೂಕು, ಯಲಹಂಕ ಹೋಬಳಿ, ಕೆಂಪನಹಳ್ಳಿ ಗ್ರಾಮದ ಸ.ನಂ.7/1, 7/2, 7/3ಪಿ, 9/1, 9/2ಪಿ ಮತ್ತು 10 ರಲ್ಲಿನ ಒಟ್ಟು 10ಎ-14ಗುಂ (0ಎ-06ಗುಂಟೆ ಖರಾಬು ಹೊರತುಪಡಿಸಿ) ವಿಸ್ತೀರ್ಣದ ಪ್ರದೇಶದಲ್ಲಿ ವಸತಿ ಅಭಿವೃದ್ಧಿ ಯೋಜನಾ ನಕ್ಷೆಯನ್ನು ಶ್ರೀ ಪ್ರದೀಪ್ ಕೃಷ್ಣಪ್ಪ ರವರ ಜಿಪಿಎದಾರರಾದ ಮೆ|| ಅಜ್ಮೀರಾ ಹೌಸಿಂಗ್ ಕಾರ್ಪೋರೇಷನ್ ರವರು ಕೋರಿ ಸಲ್ಲಿಸಲಾದ ಪ್ರಸ್ತಾವನೆಯನ್ನು ಉಲ್ಲೇಖ (2) ರಲ್ಲಿ ದಿನಾಂಕ 17.08.2017 ರಂದು ನಡೆದ ಪ್ರಾಧಿಕಾರದ ಸಮಿತಿ ಸಭೆಯ ವಿಷಯ ಸಂಖ್ಯೆ: 95/2017 ರ ತೀರ್ಮಾನದಂತೆ ಅರ್ಜಿದಾರರಿಂದ ಅಗತ್ಯ ಶುಲ್ಕಗಳನ್ನು ಪ್ರಾಧಿಕಾರಕ್ಕೆ ಪಾವತಿಸಿಕೊಂಡು ಮತ್ತು ಉದ್ಯಾನವನ / ಬಯಲುಜಾಗ, ರಸ್ತೆ ಪ್ರದೇಶವನ್ನು ಹಸ್ತಾಂತರಿಸಿಕೊಂಡು ಉಲ್ಲೇಖ (3) ರಲ್ಲಿ ವಸತಿ ಅಭಿವೃದ್ಧಿ ಯೋಜನಾ ನಕ್ಷೆ ಮತ್ತು ಕಾರ್ಯಾದೇಶ ನೀಡಲಾಗಿರುತ್ತದೆ.

ಅರ್ಜಿದಾರರು ಉಲ್ಲೇಖ [4] ರಲ್ಲಿ ಯಲಹಂಕ ತಾಲ್ಲೂಕು, ಯಲಹಂಕ ಹೋಬಳಿ, ಕೆಂಪನಹಳ್ಳಿ ಗ್ರಾಮದ ಸ.ನಂ.7/1, 7/2, 7/3ಪಿ, 9/1, 9/2ಪಿ ಮತ್ತು 10 ರಲ್ಲಿನ ಒಟ್ಟು 10ಎ-14ಗುಂ (0ಎ-06ಗುಂಟೆ ಖರಾಬು ಹೊರತುಪಡಿಸಿ) ವಿಸ್ತೀರ್ಣದ ಪ್ರದೇಶಕ್ಕೆ ಅನುಮೋದನೆಯಾದ ವಸತಿ ಅಭಿವೃದ್ಧಿ ಯೋಜನೆಯಲ್ಲಿ ಹೆಚ್ಚುವರಿಯಾಗಿ ಕಟ್ಟಡ ಮತ್ತು FAR ಅನ್ನು ಪ್ರಸ್ತಾಪಿಸಿ, RMP-2015 ರಂತೆ ಪೂರ್ವದಲ್ಲಿರುವ ಕೆರೆಯ ಗಡಿಯಿಂದ 30.0ಮೀ ಅಗಲದ ಬಫರ್ ಪ್ರದೇಶವನ್ನು ಕಾಯ್ದಿರಿಸಿ, ಮಾರ್ಪಡಿತ ವಸತಿ ಅಭಿವೃದ್ಧಿ ಯೋಜನಾ ನಕ್ಷೆಯನ್ನು ಅನುಮೋದಿಸುವಂತೆ ಕೋರಿರುತ್ತಾರೆ.

ಅಭಿವೃದ್ಧಿದಾರರು ಸಲ್ಲಿಸಿರುವ ವಸತಿ ಅಭಿವೃದ್ಧಿ ಯೋಜನಾ ನಕ್ಷೆಯನ್ನು ಪರಿಶೀಲಿಸಿ, ವಿಷಯವನ್ನು ಉಲ್ಲೇಖ [5] ರಲ್ಲಿನ ಪ್ರಾಧಿಕಾರದ ನಗರ ಯೋಜನಾ ಸಮಿತಿ ಸಭೆಯ ವಿಷಯ ಸಂಖ್ಯೆ 6.6.5/2024 ದಿನಾಂಕ 30.10.2024 ರಲ್ಲಿ ಮಂಡಿಸಿ ಚರ್ಚಿಸಲಾಗಿರುತ್ತದೆ. ಚರ್ಚೆಯ ನಂತರ ಸಭೆಯು ಈ ಕೆಳಕಂಡಂತೆ ತೀರ್ಮಾನಿಸಲಾಗಿರುತ್ತದೆ.

> "ಚರ್ಚೆಯ ನಂತರ, ಸಲ್ಲಿಸಿರುವ ಮಾರ್ಪಡಿತ ವಸತಿ ಅಭಿವೃದ್ಧಿ ಯೋಜನಾ ನಕ್ಷೆಯು ವಲಯ ನಿಯಮಾವಳಿಗಳಿಗೆ ಅನುಗುಣವಾಗಿರುವುದರಿಂದ, ಯಲಹಂಕ ತಾಲ್ಲೂಕು, ಯಲಹಂಕ ಹೋಬಳಿ, ಕೆಂಪನಹಳ್ಳಿ ಗ್ರಾಮದ ಸ.ನಂ.7/1, 7/2, 7/3, 9/1, 9/2 ಮತ್ತು 10 ರಲ್ಲಿನ ಒಟ್ಟು 10ಎ-14ಗುಂ (0ಎ-06ಗುಂಟೆ ಖರಾಬು ಹೊರತುಪಡಿಸಿ) ವಿಸ್ತೀರ್ಣದ ಜಮೀನುಗಳಲ್ಲಿ ಈ ಕೆಳಕಂಡ ಷರತ್ತುಗಳಿಗೊಳಪಡಿಸಿ, ಮಾರ್ಪಡಿತ ವಸತಿ ಅಭಿವೃದ್ಧಿ ಯೋಜನಾ ನಕ್ಷೆಯನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ (15) & (17) ರ ಅಡಿಯಲ್ಲಿ ಅನುಮೋದಿಸಲು ತೀರ್ಮಾನಿಸಲಾಯಿತು. ಈ ಕುರಿತು ನಿಯಮಾನುಸಾರ ಮುಂದಿನ ಕ್ರಮವಹಿಸುವ ಅಧಿಕಾರವನ್ನು ಆಯುಕ್ತರು ರವರಿಗೆ ಪ್ರತ್ಯಾಯೋಜಿಸಲು ನಿರ್ಣಯಿಸಲಾಯಿತು."

ಮಾರ್ಪಡಿತ ವಸತಿ ಅಭಿವೃದ್ಧಿ ಯೋಜನಾ ನಕ್ಷೆ ಅನುಮೋದನೆ ಸಂಬಂಧ ಅರ್ಜಿದಾರರಿಗೆ ಉಲ್ಲೇಖ (6) ರ ಪತ್ರದಲ್ಲಿ ವಿವಿಧ ಶುಲ್ಕಗಳ ಬಾಬ್ತು ರೂ.51,790/- [ಐವತ್ತೊಂದು ಸಾವಿರದ ಏಳು ನೂರ ತೊಂಭತ್ತು ರೂಪಾಯಿಗಳು] ಗಳನ್ನು ಪ್ರಾಧಿಕಾರಕ್ಕೆ ಪಾವತಿಸುವಂತೆ ತಿಳಿಸಲಾಗಿತ್ತು. ಅದರಂತೆ ಉಲ್ಲೇಖ (7) ರಲ್ಲಿ ಅರ್ಜಿದಾರರು ದಿನಾಂಕ 28.11.2024 ರಂದು ಕೆನರಾ ಬ್ಯಾಂಕ್ ನ ಚಲನ್ ನಂ. GN24116736 ರ ಮೂಲಕ ರೂ.51,790/- [ಐವತ್ತೊಂದು ಸಾವಿರದ ಏಳು ನೂರ

Housiey.com

ತೊಂಭತ್ತು ರೂಪಾಯಿಗಳು] ಪಾವತಿಸಿರುತ್ತಾರೆ. ಸದರಿ ಮೊತ್ತವು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಸಂದಾಯವಾಗಿರುವ ಬಗ್ಗೆ ಪ್ರಾಧಿಕಾರದ ಆರ್ಥಿಕ ವಿಭಾಗದವರು ಉಲ್ಲೇಖ (8) ರ ಪತ್ರದೊಂದಿಗೆ ಅಡಕಗೊಳಿಸಿರುವ ದಾಖಲೆಯಂತೆ ಸದರಿ ಮೊತ್ತವು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಸಂದಾಯವಾಗಿರುತ್ತದೆ.

ಮಾರ್ಪಡಿತ ವಸತಿ ಅಭಿವೃದ್ಧಿ ಯೋಜನಾ ನಕ್ಷೆಯಲ್ಲಿ ಪ್ರಸ್ತಾಪಿಸಿರುವ ಉದ್ಯಾನವನ ಮತ್ತು ಬಯಲು ಜಾಗ ಮತ್ತು ರಸ್ತೆ ವಿಸ್ತರಣೆ ಪ್ರದೇಶಗಳನ್ನು ಪ್ರಾಧಿಕಾರಕ್ಕೆ ಪರಿತ್ಯಜನಾ ಪತ್ರದ ಮೂಲಕ ಪುಕ್ಕಟೆಯಾಗಿ ಹಸ್ತಾಂತರಿಸಿಕೊಳ್ಳುವಂತೆ ಕಾರ್ಯಪಾಲಕ ಅಭಿಯಂತರರು, ಡಾ: ಕೆ. ಶಿವರಾಮಕಾರಂತ ಬಡಾವಣೆ ವಿಭಾಗ ರವರಿಗೆ ಉಲ್ಲೇಖ [9] ರಂತೆ ತಿಳಿಸಲಾಗಿತ್ತು. ಮಾರ್ಪಡಿತ ವಸತಿ ಅಭಿವೃದ್ಧಿ ಯೋಜನಾ ನಕ್ಷೆಯಲ್ಲಿನ ಉದ್ಯಾನವನ/ ಬಯಲುಜಾಗ ಮತ್ತು ರಸ್ತೆ ವಿಸ್ತರಣೆ ಪ್ರದೇಶಗಳನ್ನು ನೊಂದಾಯಿತ ಪರಿತ್ಯಾಜನಾ ಪತ್ರದ ಮೂಲಕ ಉಲ್ಲೇಖ [10] ರಂತೆ ಪ್ರಾಧಿಕಾರಕ್ಕೆ ಹಸ್ತಾಂತರಿಸಿ ಕೊಂಡಿರುವುದಾಗಿ ಕಾರ್ಯಪಾಲಕ ಅಭಿಯಂತರ ರವರು ಉಲ್ಲೇಖ [11] ರಲ್ಲಿ ವರದಿ ನೀಡಿರುತ್ತಾರೆ.

ಈ ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಯಲಹಂಕ ತಾಲ್ಲೂಕು, ಯಲಹಂಕ ಹೋಬಳಿ, ಕೆಂಪನಹಳ್ಳಿ ಗ್ರಾಮದ ಸ.ನಂ.7/1, 7/2, 7/3ಪಿ, 9/1, 9/2ಪಿ ಮತ್ತು 10 ರಲ್ಲಿನ ಒಟ್ಟು 10ಎ-14ಗುಂ (0ಎ-06ಗುಂಟೆ ಖರಾಬು ಹೊರತುಪಡಿಸಿ) ವಿಸ್ತೀರ್ಣದ ಪ್ರದೇಶಕ್ಕೆ ಮಾರ್ಪಡಿತ ವಸತಿ ಅಭಿವೃದ್ಧಿ ಯೋಜನಾ ನಕ್ಷೆಗೆ ಈ ಕೆಳಕಂಡ ಷರತ್ತುಗಳಿಗೊಳಪಡಿಸಿ ಅನುಮೋದನೆ ನೀಡಲಾಗಿದೆ.

| | |
|---|---|
| 1 | ದಿನಾಂಕ: 02.03.2018 ರಂದು ಪ್ರಾಧಿಕಾರದಿಂದ ನೀಡಿರುವ ಕಾರ್ಯಾದೇಶ ಮತ್ತು ವಸತಿ ಅಭಿವೃದ್ಧಿ ಯೋಜನಾ ನಕ್ಷೆಯನ್ನು ರದ್ದುಪಡಿಸಲಾಗಿದೆ. |
| 2 | ಪ್ರಾಧಿಕಾರವು ಅನುಮೋದಿಸಿರುವ ಮಾರ್ಪಡಿತ ವಸತಿ ಅಭಿವೃದ್ಧಿ ಯೋಜನಾ ನಕ್ಷೆಯಂತೆಯೇ ಅಭಿವೃದ್ಧಿ ಕಾರ್ಯಗಳನ್ನು ಕಾರ್ಯಗತ ಮಾಡುವುದು. ಪ್ರಾಧಿಕಾರದ ಪೂರ್ವಾನುಮತಿ ಇಲ್ಲದೆ ಯಾವುದೇ ಬದಲಾವಣೆ ಮಾಡುವಂತಿಲ್ಲ. |
| 3 | ಅಭಿವೃದ್ಧಿದಾರರು ಉದ್ಯಾನವನಕ್ಕಾಗಿ ಕಾಯ್ದಿರಿಸುವ ಪ್ರದೇಶದಲ್ಲಿ ವಿವಿದ ಜಾತಿಯ ಮರಗಿಡಗಳನ್ನು ಬೆಳೆಸಿ ಅಭಿವೃದ್ಧಿ ಪಡಿಸುವುದು. ಹಾಗೂ ಸದರಿ ಉದ್ದೇಶಕ್ಕಾಗಿ ಕಾಯ್ದಿರಿಸಿ ಉಪಯೋಗಿಸತಕ್ಕದ್ದು ಬೇರೆ ಯಾವುದೇ ಉದ್ದೇಶಗಳಿಗೆ ಬದಲಾಯಿಸಬಾರದು. |
| 4 | ವಿವರವಾದ ಕಟ್ಟಡ ನಕ್ಷೆಗಳನ್ನು ಸಕ್ಷಮ ಪ್ರಾಧಿಕಾರದಿಂದ ಅನುಮೋದಿಸಿಕೊಳ್ಳುವುದು. |
| 5 | ಸದರಿ ಪ್ರದೇಶದ ಒಳಗೆ ಹೋಗಲು ಮತ್ತು ಹೊರಗೆ ಬರಲು ಸಂಚಾರ ವ್ಯವಸ್ತೆಯಲ್ಲಿ ಅಡಚಣೆ ಉಂಟಾಗದಂತೆ ವ್ಯವಸ್ಥೆ ಕಲ್ಪಿಸುವುದು. ವಾಹನ ತಪಾಸಣೆಗೆ ಮತ್ತು ಭದ್ರತಾ ವ್ಯವಸ್ತೆಯನ್ನು ಅಳವಡಿಸಿದಲ್ಲಿ ಸ್ವತ್ತಿನ ಒಳಭಾಗದಲ್ಲಿ ನಿರ್ವಹಿಸುವುದು. |
| 6 | ಮಾರ್ಪಡಿತ ವಸತಿ ಅಭಿವೃದ್ಧಿ ಯೋಜನೆ ನಕ್ಷೆಯಲ್ಲಿ ಕಾಯ್ದಿರಿಸಿರುವ ಉದ್ಯಾನವನ / ಬಯಲುಜಾಗದ ಪ್ರದೇಶವು ಸೇರಿದಂತೆ ಹಾಗೂ ವಸತಿ ಅಭಿವೃದ್ಧಿ ಯೋಜನಾ ಪ್ರದೇಶದಲ್ಲಿ 240.0 ಚ.ಮೀ FAR ಪ್ರದೇಶಕ್ಕೆ ಒಂದು ಮರದಂತೆ ವಿವಿಧ ಜಾತಿಯ ಗಿಡಮರಗಳನ್ನು ಬೆಳಸಿ ಅಭಿವೃದ್ಧಿಪಡಿಸುವುದು. |

| | |
|---|---|
| 7 | ಕಟ್ಟಡ ಕಾಮಗಾರಿ ಪ್ರಾರಂಭವಾದ ನಂತರ ಕಟ್ಟಡ ಸುರಕ್ಷತೆಯ ಬಗ್ಗೆ ಸಂಬಂಧಿಸಿದ ಸಕ್ಷಮ ಪ್ರಾಧಿಕಾರವು ಪರಿಶೀಲಿಸಿಕೊಳ್ಳತಕ್ಕದ್ದು. ಸಿವಿಲ್ ಕಾಮಗಾರಿ ಮತ್ತು ಕಟ್ಟಡ ಕಾಮಾಗಾರಿಗೆ BWSSB ಯಿಂದ ಸಂಸ್ಕರಿಸಿದ ತ್ಯಾಜ್ಯ ನೀರನ್ನು ಪಡೆದು ಉಪಯೋಗಿಸಿಕೊಳ್ಳತಕ್ಕದ್ದು. |
| 8 | ಮಾರ್ಪಡಿತ ವಸತಿ ಅಭಿವೃದ್ಧಿ ಯೋಜನಾ ನಕ್ಷೆಯಲ್ಲಿ ಕಾಯ್ದಿರಿಸಿರುವ ಸಿ.ಎ ಜಾಗವನ್ನು ಯಥಾವತ್ತಾಗಿ ಹಾಲಿ ಸ್ಥಳದಲ್ಲಿ ವಲಯ ನಿಯಮಾವಳಿಗಳ ಅಧ್ಯಾಯ 7.1.2 ರಂತೆ ಅಭಿವೃದ್ಧಿಪಡಿಸತಕ್ಕದ್ದು. |
| 9 | ಅರ್ಜಿದಾರರು ಉದ್ದೇಶಿಸಿರುವ ಜಮೀನಿನಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ / ಅನ್ಯಖಾಸಗಿ ಜಮೀನುಗಳೇನಾದರೂ ಸೇರಿಕೊಂಡಿರುವುದು ತಿಳಿದುಬಂದಲ್ಲಿ ಅಂತಹ ಸಂದರ್ಭದಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆಯುಕ್ತರು ಅನುಮೋದಿತ ಅಭಿವೃದ್ಧಿ ನಕ್ಷೆಯನ್ನು ಮಾರ್ಪಾಡು ಮಾಡಲು ಅಥವಾ ಹಿಂತೆಗೆದುಕೊಳ್ಳಲು ಅಧಿಕಾರವುಳ್ಳವರಾಗಿರುತ್ತಾರೆ. |
| 10 | ದಿನಾಂಕ: 16/1/2010 ರಂದು ಸರ್ಕಾರದ ಅಪರ ಮುಖ್ಯಕಾರ್ಯದರ್ಶಿ ನಗರಾಭಿವೃದ್ಧಿ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯ ನಡವಳಿಯಲ್ಲಿ ತೆಗೆದುಕೊಂಡ ನಿರ್ಣಯದಂತೆ ಹಾಗೂ ದಿನಾಂಕ: 07/01/2011 ರಂದು ಜರುಗಿದ ಸಮಿತಿ ಸಭೆಯ ವಿಷಯ ಸಂಖ್ಯೆ:09/2011ರ ತೀರ್ಮಾನದಂತೆ ಅಭಿವೃದ್ಧಿ ನಕ್ಷೆಯಲ್ಲಿ Arrangement of Blocks ಗಳನ್ನು ವಲಯನಿಯಮಾವಳಿಗಳಂತೆ ಪರಿಶೀಲಿಸಲಾಗಿದ್ದು, ಕಟ್ಟಡನಕ್ಷೆಗೆ ಸಂಬಂಧಿಸಿದ ಇತರೆ ವಿವರಗಳನ್ನು ಪರಿಶೀಲಿಸುವುದಿಲ್ಲ. ಹಾಗಾಗಿ ಕಟ್ಟಡ ನಕ್ಷೆ ಅನುಮೋದಿಸುವ ಸಕ್ಷಮ ಪ್ರಾಧಿಕಾರವು ಅಭಿವೃದ್ಧಿ ಯೋಜನೆಯಲ್ಲಿ ನಿಗಧಿಪಡಿಸಲಾದ ಅನುಮತಿಸಬಹುದಾದ ಗರಿಷ್ಠ FAR ಮೀರದಂತೆ ಪರಿಶೀಲಿಸಿಕೊಂಡು ಅದರಂತೆ ಕ್ರಮವಹಿಸಬಹುದು ಮತ್ತು ನಿಗಧಿಪಡಿಸಲಾಗಿತ್ತು ಸದರಿ ಕಟ್ಟಡ ನಿರ್ಮಾಣ ಸಂಬಂಧಿಸಿದಂತೆ ಅವಶ್ಯವಿರುವ ವಿವಿಧ ಇಲಾಖೆಗಳಿಂದ ಅಗತ್ಯ NOC ಗಳನ್ನು ಮತ್ತು ಇನ್ನಿತರೇ ಮಾಹಿತಿಗಳನ್ನು ಅರ್ಜಿದಾರರಿಂದ ಪಡೆದು ನಿಯಮಾನುಸಾರ ಪರಿಶೀಲಿಸಿಕೊಳ್ಳತಕ್ಕದ್ದು. |
| 11 | ಮಾರ್ಪಡಿತ ವಸತಿ ಅಭಿವೃದ್ಧಿ ಯೋಜನಾ ನಕ್ಷೆ ಅನುಮೋದನೆ ಸಂಬಂಧ ಜಮೀನಿನ ಮಾಲೀಕತ್ವದ ಬಗ್ಗೆ ಅರ್ಜಿದಾರರು ತಪ್ಪು ಮಾಹಿತಿ / ದಾಖಲಾತಿ ನೀಡಿ ಅನುಮೋದನೆ ಪಡೆದಿದ್ದು ದೃಢಪಟ್ಟಲ್ಲಿ ಮತ್ತು ಮಾಲೀಕತ್ವದ ಬಗ್ಗೆ ನ್ಯಾಯಾಲಯದಲ್ಲಿ ತಕರಾರು ಉದ್ಭವವಾದಲ್ಲಿ ಅಭಿವೃದ್ಧಿ ಯೋಜನಾ ನಕ್ಷೆಯ ಅನುಮೋದನೆಯನ್ನು ರದ್ದುಗೊಳಿಸುವ ಅಥವಾ ಹಿಂಪಡೆಯುವ ಅಧಿಕಾರವನ್ನು ಕೆಟಿಸಿಪಿ ಕಾಯ್ದೆ ಕಲಂ 76 (O) ರಡಿಯಲ್ಲಿ ಪ್ರಾಧಿಕಾರದ ಆಯುಕ್ತರು ಅಧಿಕಾರ ಹೊಂದಿದ್ದು, ಅದರಂತೆ ಕ್ರಮ ಜರುಗಿಸಲಾಗುವುದು. |
| 12 | ಮಾರ್ಪಡಿತ ವಸತಿ ಅಭಿವೃದ್ಧಿ ಯೋಜನೆಯಲ್ಲಿನ ವಸತಿ ಘಟಕಗಳಿಂದ ಉತ್ಪತ್ತಿಯಾಗುವ ಘನತ್ಯಾಜ್ಯಗಳ ವಿಂಗಡಣೆ ಮತ್ತು ಶೇಖರಣೆಗಾಗಿ ಸೂಕ್ತ ಸ್ಥಳವನ್ನು ಕಾಯ್ದಿರಿಸತಕ್ಕದ್ದು. |
| 13 | ಪ್ರಸ್ತಾಪಿತ ಜಮೀನನ್ನು ಅಭಿವೃದ್ಧಿಪಡಿಸುವ ಸಂದರ್ಭದಲ್ಲಿ ಅರ್ಜಿದಾರರು ಕಡ್ಡಾಯವಾಗಿ ಮಳೆನೀರು ಮಳೆ ನೀರು ಕೊಯ್ಲಿಗೆ ಸಂಬಂಧಿಸಿದಂತೆ ಪೂರ್ಣ ವಿವರಗಳನ್ನು ನಕ್ಷೆಯಲ್ಲಿ ಗುರುತಿಸಿ ಉದ್ದೇಶಿತ ಒಟ್ಟು ಕ್ಷೇತ್ರದಲ್ಲಿ ಯಾವುದೇ ರೀತಿಯ ಮಳೆ ನೀರು ವ್ಯರ್ಥವಾಗಿ ಹೊರಗೆ ಹೋಗದಂತೆ ಉದ್ದೇಶಿತ ಜಮೀನಿನಲ್ಲಿಯೇ ಭೂಮಿಯ ಒಳಗಡೆ ಇಂಗುವಂತೆ ಮಾಡಲು ವಿನ್ಯಾಸವನ್ನು ಸಿದ್ದಪಡಿಸಿ ಪೂರ್ಣ ವಿವರಗಳನ್ನು ನಕ್ಷೆಯಲ್ಲಿ ಗುರುತಿಸಿ ತೋರಿಸತಕ್ಕದ್ದು. |

| | |
|---|---|
| 14 | ಪ್ರಸ್ತಾಪಿತ ಜಮೀನನ್ನು ಅಭಿವೃದ್ಧಿ ಪಡಿಸುವ ಸಂದರ್ಭದಲ್ಲಿ BESCOM ನಿರ್ದೇಶನದಂತೆ ಎಲೆಕ್ಟ್ರಿಕ್ ಕೇಬಲ್ ಗಳನ್ನು ಅಳವಡಿಸತಕ್ಕದ್ದು. |
| 15 | ನಾಲಾ ಬಫರ್ ಗಾಗಿ ಕಾಯ್ದಿರಿಸಿರುವ ಪ್ರದೇಶವನ್ನು ಸ್ಥಳೀಯ ಸಂಸ್ಥೆ ಅಥವಾ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಇತರೆ ಸರ್ಕಾರಿ ಅಥವಾ ಸರ್ಕಾರೇತರ ಸಂಸ್ಥೆಗಳಿಂದ Storm Water Drain ಅಥವಾ ಒಳಚರಂಡಿ ವ್ಯವಸ್ಥೆಗಳು ಹಾಗೂ ರಸ್ತೆಯನ್ನು ಅಭಿವೃದ್ಧಿಪಡಿಸುವ ಸಂದರ್ಭದಲ್ಲಿ ಮುಫತ್ತಾಗಿ ಸಾರ್ವಜನಿಕ ಉಪಯೋಗಕ್ಕಾಗಿ ನೊಂದಾಯಿತ ಪರಿತ್ಯಜನಾ ಪತ್ರದ ಮೂಲಕ ಪ್ರಾಧಿಕಾರಕ್ಕೆ ಹಸ್ತಾಂತರಿಸತಕ್ಕದ್ದು. |
| 16 | ರೆವಿನ್ಯೂ ದಾಖಲೆಗಳ / ಜಮೀನಿನ ಮಾಲೀಕತ್ವದ ದಾಖಲೆಗಳ ಸಂಬಂಧ ಯಾವುದೇ ನ್ಯಾಯಾಲಯದಲ್ಲಿ ಲೋಕಾಯುಕ್ತದಲ್ಲಾಗಲೀ ಯಾವುದೇ ಪ್ರಕರಣ ಇರುವುದಿಲ್ಲವೆಂದು ಸಲ್ಲಿಸಿರುವ ನೋಟರೈಸ್ಡ್ ಪ್ರಮಾಣ ಪತ್ರಕ್ಕೆ ಬದ್ಧರಾಗಿರತಕ್ಕದ್ದು. ಪ್ರಾಧಿಕಾರವು ಈ ಬಗ್ಗೆ ಜವಾಬ್ದಾರಿಯಾಗುವುದಿಲ್ಲ. |
| 17 | ಮಾರ್ಪಡಿತ ವಸತಿ ಯೋಜನೆಯಲ್ಲಿನ ವಸತಿ ಘಟಕಗಳಿಗೆ ಕುಡಿಯುವ ನೀರಿಗಾಗಿ ಮತ್ತು ಇತರೆ ಉಪಯೋಗದ ನೀರಿಗಾಗಿ ಪ್ರತ್ಯೇಕವಾದ ಕೊಳಾಯಿ ವ್ಯವಸ್ಥೆಯನ್ನು (Duel piping System) ಮಾಡತಕ್ಕದ್ದು. ವಸತಿ ಘಟಕಗಳಿಂದ ಬರುವ ಕೊಳಚೆ ನೀರನ್ನು ಸಂಸ್ಕರಣೆ ಮಾಡಲು ಯೋಜನೆಯಲ್ಲಿ ಸಂಸ್ಕರಣಾ ಘಟಕ ಸ್ಥಾಪಿಸಿ, ಸಂಸ್ಕರಿಸಿದ ನೀರನ್ನು ಇತರೆ ಉಪಯೋಗಗಳಿಗಾಗಿ ಉಪಯೋಗಿಸತಕ್ಕದ್ದು ಮತ್ತು ಒಳಚರಂಡಿ ವ್ಯವಸ್ಥೆಯನ್ನು ಅರ್ಜಿದಾರರೇ ಕಲ್ಪಿಸುವುದು. |
| 18 | BWSSB, BESCOM, KSPCB, ವಾಯುಯಾನ ಪ್ರಾಧಿಕಾರ, ಅಗ್ನಿಶಾಮಕ ಇಲಾಖೆ ಗಳಿಂದ NOC ಪಡೆದು ಕಟ್ಟಡ ನಕ್ಷೆ ಅನುಮೋದನೆ ಮೊದಲು ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸಬೇಕಿರುತ್ತದೆ. ಅನುಮತಿ ನೀಡುವ ಸಕ್ಷಮ ಪ್ರಾಧಿಕಾರವು ಅದನ್ನು ಪರಿಸೀಲಿಸಿಕೊಳ್ಳತಕ್ಕದ್ದು. |
| 19 | ಪ್ರಶ್ನಿತ ಪ್ರದೇಶದಲ್ಲಿ ಹಾದು ಹೋಗುವ ಹಳ್ಳ ಕೊಳ್ಳಗಳ ನೀರಿನ ಹರಿವಿಗೆ ಅಡಚಣೆ ಉಂಟು ಮಾಡದೆ ಸರಾಗವಾಗಿ ಹಾದು ಹೋಗುವಂತೆ ಅಭಿವೃದ್ಧಿ ಪಡಿಸುವುದು. |
| 20 | ರೇರಾ ಅಧಿನಿಯಮ, 2016 ಹಾಗೂ ಸಂಬಂದಿತ ನಿಯಮಗಳು, 2017 ರನ್ವಯ ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರದಲ್ಲಿ ನೋಂದಣಿ ಮಾಡಿಸುವುದು. |
| 21 | ಸ್ವಾಭಾವಿಕವಾಗಿ ಇಳಿಮಟ್ಟದ ಕಡೆ ಹೋಗುವ ಮಳೆನೀರನ್ನು ಡ್ರೈನ್ ಮುಖಾಂತರ ವ್ಯಾಲಿಗೆ ತಂದು ಸೇರಿಸುವುದು ಹಾಗೂ ನೀರು ಸರಾಗವಾಗಿ ಹರಿಯಲು ಸೂಕ್ತ ವ್ಯವಸ್ಥೆ ಮಾಡುವುದು. |
| 22 | ಕಟ್ಟಡ ನಕ್ಷೆ ಅನುಮೋದನೆ ಸಮಯದಲ್ಲಿ ತಳಮಹಡಿ ಅಗತ್ಯತೆ ಬಗ್ಗೆ Water table ನ ವರದಿ ಪಡೆದು ಅದಕ್ಕನುಗುಣವಾಗಿ ಕ್ರಮ ಜರುಗಿಸುವುದು. |
| 23 | ವಿವರವಾದ ಕಟ್ಟಡ ನಕ್ಷೆಗಳನ್ನು ಅನುಮೋದಿಸುವ ಸಕ್ಷಮ ಪ್ರಾಧಿಕಾರವು Structural Stability ಬಗ್ಗೆ ಪರಿಶೀಲಿಸಿಕೊಳ್ಳತಕ್ಕದ್ದು. |
| 24 | ಬಫರ್ ಪ್ರದೇಶದಲ್ಲಿ ಗಿಡಮರಗಳನ್ನು ಬೆಳೆಸತಕ್ಕದ್ದು. |
| 25 | ಪ್ರಾಧಿಕಾರವು ವಿಧಿಸುವ ಇತರೆ ಷರತ್ತುಗಳಿಗೆ ಬದ್ಧರಾಗಿರುವುದು. |

Housiey.com

**ವಿಷಯ:-** ಯಲಹಂಕ ತಾಲ್ಲೂಕು, ಯಲಹಂಕ ಹೋಬಳಿ, ಕೆಂಪನಹಳ್ಳಿ ಗ್ರಾಮದ ಸ.ನಂ.7/1, 7/2, 7/3ಪಿ, 9/1, 9/2ಪಿ ಮತ್ತು 10 ರಲ್ಲಿನ ಒಟ್ಟು 10ಎ-14ಗುಂ (0ಎ-06ಗುಂಟೆ ಖರಾಬು ಹೊರತುಪಡಿಸಿ) ವಿಸ್ತೀರ್ಣದ ಪ್ರದೇಶದಲ್ಲಿ ಮಾರ್ಪಡಿತ ವಸತಿ ಅಭಿವೃದ್ಧಿ ಯೋಜನಾ ನಕ್ಷೆಗೆ ಅನುಮೋದನೆ ನೀಡುವಂತೆ ಅರ್ಜಿದಾರರಾದ ಶ್ರೀ ಪ್ರದೀಪ್ ಕೃಷ್ಣಪ್ಪ ರವರ ಜಿಪಿಎದಾರರಾದ ಮೆ|| ಅಜ್ಮೀರಾ ಹೌಸಿಂಗ್ ಕಾರ್ಪೋರೇಷನ್ ರವರು ಕೋರಿರುವ ಕುರಿತು.

---

ಮೇಲ್ಕಂಡ ಷರತ್ತುಗಳಿಗೆ ಒಳಪಡಿಸಿ ಯಲಹಂಕ ತಾಲ್ಲೂಕು, ಯಲಹಂಕ ಹೋಬಳಿ, ಕೆಂಪನಹಳ್ಳಿ ಗ್ರಾಮದ ಸ.ನಂ.7/1, 7/2, 7/3ಪಿ, 9/1, 9/2ಪಿ ಮತ್ತು 10 ರಲ್ಲಿನ ಒಟ್ಟು 10ಎ-14ಗುಂ (0ಎ-06ಗುಂಟೆ ಖರಾಬು ಹೊರತುಪಡಿಸಿ) ವಿಸ್ತೀರ್ಣದ ಪ್ರದೇಶದಲ್ಲಿ ಮಾರ್ಪಡಿತ ವಸತಿ ಅಭಿವೃದ್ಧಿ ಯೋಜನಾ ನಕ್ಷೆ ಅನುಮೋದನೆ ನೀಡಲಾಗಿದೆ.

ಆಯುಕ್ತರು,
ಬೆಂಅಪ್ರಾ, ಬೆಂಗಳೂರು.

ಇವರಿಗೆ

ಶ್ರೀ ಪ್ರದೀಪ್ ಕೃಷ್ಣಪ್ಪ ರವರ ಜಿಪಿಎದಾರರಾದ
ಮೆ|| ಅಜ್ಮೀರಾ ಹೌಸಿಂಗ್ ಕಾರ್ಪೋರೇಷನ್
"ಅಜ್ಮೀರಾ ನ್ಯೂಸೆಲ್ಸ್"
ಸರ್ವೆ ನಂ.13/2, 13/5, 14/1 (14/20) & 14/2
ದೊಡ್ಡನಾಗಮಂಗಲ ಗ್ರಾಮ, ಎಲೆಕ್ಟ್ರಾನಿಕ್ ಸಿಟಿ,
ಫೇಸ್-2, ಬೆಂಗಳೂರು -560 100.

Housiey.com